- ಏಪ್ರಿಲ್ 22 ವಿಶ್ವ ಭೂ ದಿನಾಚರಣೆ, ಜೂನ್ 5 ವಿಶ್ವ ಪರಿಸರ ದಿನಾಚರಣೆ, ಸೆಪ್ಟೆಂಬರ್ 16 ಓಜೋನ್ ದಿನಾಚರಣೆ ಹೀಗೆ ವರ್ಷದಲ್ಲಿ ಬರುವಂತಹ ವಿವಿಧ ಪರಿಸರ ಸಂಬಂಧಿ ದಿನಗಳನ್ನು ಇಕೋ-ಕ್ಲಬ್‌ನ ಮೂಲಕ ಆಚರಣೆ ಮಾಡುವುದು, ಅವರ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು
- ಪರಿಸರ ದಿನಾಚರಣೆಗೆ ಸಂಬಂಧಿಸಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸುವುದು, ಮಕ್ಕಳಿಗೆ ಬಹುಮಾನಗಳನ್ನು ನೀಡುವುದು.

ಪ್ಲಾಸ್ಟಿಕ್ ಮುಕ್ತ ಶಾಲಾವರಣ

- ಶಾಲೆಯನ್ನು ಸಂಪೂರ್ಣವಾಗಿ ಪ್ಲಾಸ್ಟಿಕ್ ಮುಕ್ತ ಶಾಲೆಯಾಗಿ ಪರಿವರ್ತಿಸಲು ಕ್ರಮಕೈಗೊಳ್ಳುವುದು
- ಶಾಲಾವರಣದಲ್ಲಿ ಮಕ್ಕಳು ಪ್ಲಾಸ್ಟಿಕ್ ಬಳಸದಂತೆ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು
- ಪರ್ಯಾಯವಾಗಿ ಗೋಣಿಚೀಲದ ಬ್ಯಾಗ್‌ಗಳು ಅಥವಾ ಪೇಪರ್‌ಬ್ಯಾಗ್‌ಗಳನ್ನು ಬಳಸುವಂತೆ ಮಕ್ಕಳಿಗೆ ತಿಳಿಸುವುದು
- ಶಾಲಾವರಣದಲ್ಲಿ 'ನಮ್ಮ ಶಾಲೆ ಪ್ಲಾಸ್ಟಿಕ್ ಮುಕ್ತ ಶಾಲೆ' ನಾಮಫಲಕವನ್ನು ಹಾಕಿ ಇತರರಿಗೂ ಪ್ಲಾಸ್ಟಿಕ್ ಬಳಸದಂತೆ ಸಂದೇಶವನ್ನು ಸಾರುವುದು.

ಇಕೋ-ಕ್ಲಬ್‌ಗಳಲ್ಲಿ ಅನುಷ್ಠಾನಗೊಳಿಸಬಹುದಾದ ಇತರ ಚಟುವಟಿಕೆಗಳು.

ಗುಂಡು ತೋಪು/ ಪಾರ್ಕ್/ ಕೆರೆ/ ನದಿ/ ಹೊಳೆ/ ಅಳಿವೆ/ ಹೊಲ/ ಬಂಡೆಪ್ರದೇಶ/ಕೊಳ/ ಸಮುದ್ರ ದಂಡೆ ಮುಂತಾದ ಪ್ರದೇಶಗಳ ಅಧ್ಯಯನ.

- ಪರಿಸರಕ್ಕೆ ಸಂಬಂಧಿಸಿದಂತೆ ಮೇಲೆ ತಿಳಿಸಿರುವ ಪ್ರದೇಶಗಳಿಗೆ ಭೇಟಿ ಮಾಡಿ ಅಲ್ಲಿರುವ ಜೀವವೈವಿಧ್ಯತೆಯನ್ನು ಗುರುತಿಸಿ ಅಧ್ಯಯನ ಮಾಡುವುದು
- ಮೇಲೆ ತಿಳಿಸಿರುವ ಸ್ಥಳಗಳಲ್ಲಿ ದೊರೆಯುವ ಜೀವವೈವಿಧ್ಯತೆಯಿಂದ ಪರಿಸರಕ್ಕೆ ಆಗುತ್ತಿರುವ ಉಪಯೋಗಗಳನ್ನು ಪಟ್ಟಿಮಾಡುವುದು.
- ಅಲ್ಲಿನ ಜೀವವೈವಿಧ್ಯತೆ ಮತ್ತು ಪರಿಸರ ಎದುರಿಸುತ್ತಿರುವ

ಜೀವವೈವಿಧ್ಯತೆಯ ಅಧ್ಯಯನ

- ಆಹಾರ ಸರಪಳಿಯ ಬಗ್ಗೆ ಅಧ್ಯಯನ ಮಾಡುವುದು
- ಸ್ಥಳೀಯ ಸಸ್ಯಪ್ರಭೇದಗಳ ಬಗ್ಗೆ ಅಧ್ಯಯನ ಮಾಡುವುದು
- ಸ್ಥಳೀಯ ಪ್ರಾಣಿ-ಪಕ್ಷಿಗಳ ಬಗ್ಗೆ ಅಧ್ಯಯನ ಮಾಡುವುದು.
- ಸಿಹಿನೀರಿನ ಮೀನುಗಳ ಬಗ್ಗೆ ಅಧ್ಯಯನ
- ಹುಲ್ಲುಗಾವಲುಗಳ ಬಗ್ಗೆ ಅಧ್ಯಯನ
- ಜೀವವೈವಿಧ್ಯತೆಯ ಸಂರಕ್ಷಣೆ ಕುರಿತು ಅಧ್ಯಯನ

ಔಷಧಿ ವನ ಬೆಳೆಸುವುದು

- ಶಾಲಾವರಣದಲ್ಲಿ ಔಷಧಿವನ ಬೆಳೆಸಲು ಮುಂದಾಗುವುದು
- ತುಳಸಿ, ಬೇವು ಇತ್ಯಾದಿ ಔಷಧಿ ಗಿಡಗಳನ್ನು ಬೆಳೆಸುವುದು
- ಔಷಧಿವನದ ಮೂಲಕ ಮನೆಔಷಧಿಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು
- ಔಷಧಿಗಿಡಗಳನ್ನು ಬೆಳೆಸುವುದರ ಅಗತ್ಯತೆಯನ್ನು ಮಕ್ಕಳಿಗೆ ತಿಳಿಸುವುದು

ಎಲೆ ಮತ್ತು ಬೀಜ ಸಂಗ್ರಹಣೆ, ಅಧ್ಯಯನ ಪ್ರದರ್ಶನ.

- ವಿವಿಧ ಸಸ್ಯಪ್ರಭೇದಗಳ ಎಲೆ ಮತ್ತು ಬೀಜಗಳನ್ನು ಸಂಗ್ರಹಣೆ ಮಾಡುವುದು
- ಸಂಗ್ರಹಿಸಿದ ಎಲೆ ಮತ್ತು ಬೀಜಗಳ ಬಗ್ಗೆ ಅಧ್ಯಯನ ಮಾಡುವುದು
- ಎಲೆ ಮತ್ತು ಬೀಜಗಳನ್ನು ಪ್ರದರ್ಶಿಸುವ ಮೂಲಕ ಅವುಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು
- ಎಲೆ ಮತ್ತು ಬೀಜಗಳ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಕಲೆಹಾಕುವುದು

ಸ್ಥಳೀಯ ಪ್ರಭೇದಗಳ ಗಿಡಗಳನ್ನು ನೆಡುವುದು.

- ಶಾಲಾವನದಲ್ಲಿ ಆದಷ್ಟು ಸ್ಥಳೀಯ ಪ್ರಭೇದದ ಗಿಡಗಳನ್ನು ನೆಡುವುದು
- ಸ್ಥಳೀಯ ಪ್ರಭೇದದ ಗಿಡಗಳ ಬಗ್ಗೆ ಅಧ್ಯಯನ ಮಾಡುವುದು
- ಸ್ಥಳೀಯ ಪ್ರಭೇದದ ಗಿಡಗಳನ್ನು ಗುರುತಿಸುವುದು

ಅರಣ್ಯ ಮತ್ತು ಪಕ್ಷಿಧಾಮಗಳ ಅಧ್ಯಯನ

- ಹತ್ತಿರದ ಅರಣ್ಯಧಾಮಗಳಿಗೆ ಭೇಟಿ ನೀಡಿ ಅಲ್ಲಿರುವ ಜೀವವೈವಿಧ್ಯತೆಯ ಬಗ್ಗೆ ಅಧ್ಯಯನ ಮಾಡುವುದು
- ಅರಣ್ಯದಲ್ಲಿ ಕಾಣಸಿಗುವ ವಿವಿಧ ಸಸ್ಯಪ್ರಭೇದಗಳ ಬಗ್ಗೆ ಅಧ್ಯಯನ ಮಾಡುವುದು
- ಅಲ್ಲಿ ಕಾಣಸಿಗುವ ಪ್ರಾಣಿಗಳ ಜೀವವಿಧಾನ ಮತ್ತು ಆಹಾರದ ಬಗ್ಗೆ ಅಧ್ಯಯನ ಮಾಡುವುದು
- ಸ್ಥಳೀಯ ಪಕ್ಷಿಧಾಮಗಳಿಗೆ ಭೇಟಿ ನೀಡಿ, ಪಕ್ಷಿಗಳ ಚಲನ-ವಲನಗಳನ್ನು ವೀಕ್ಷಿಸುವುದು
- ಪಕ್ಷಿಗಳ ಜೀವವಿಧಾನ ಮತ್ತು ಆಹಾರದ ವೈವಿಧ್ಯತೆ/ವೈಖರಿಯನ್ನು ಕುರಿತು ಅಧ್ಯಯನ ಮಾಡುವುದು

ಹೈಡ್ರೋ-ಪೋನಿಕ್ಸ್ (ನೀರ್ಬೇಸಾಯ) ಮೂಲಕ ತರಕಾರಿ ಮತ್ತು ಔಷಧಿ ಗಿಡಗಳನ್ನು ಬೆಳೆಸುವುದು.

- ನೀರ್ಬೇಸಾಯ ಎಂದರೇನು? ಇದು ನಮ್ಮ ಸಹಜಕೃಷಿಯಿಂದ ಹೇಗೆ ಭಿನ್ನವಾಗಿದೆ ಎಂಬುವುದನ್ನು ಅಧ್ಯಯನ ಮಾಡುವುದು
- ನೀರ್ಬೇಸಾಯದ ಮೂಲಕ ಶಾಲಾವರಣದಲ್ಲಿ ತರಕಾರಿಗಳನ್ನು ಬೆಳೆಸಲು ಮುಂದಾಗುವುದು
- ನೀರ್ಬೇಸಾಯದ ಮೂಲಕ ಶಾಲಾವರಣದಲ್ಲಿ ಔಷಧಿ ಗಿಡಗಳನ್ನು ಬೆಳೆಸಲು ಮುಂದಾಗುವುದು

ಉಪಯೋಗಿಸಿದ ಕಾಗದದ ಪುನರ್‌ಬಳಕೆ

- ಉಪಯೋಗಿಸಿ ಬಿಸಾಡಿದ ಕಾಗದಗಳನ್ನು ಹೇಗೆ ಪುನರ್‌ಬಳಕೆ ಮಾಡುಬಹುದು ಎಂಬುವುದನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು
- ಬಿಸಾಡಿದ ಕಾಗದಗಳನ್ನು ಉಪಯೋಗಿಸಿ ಪೇಪರ್‌ಬ್ಯಾಗ್, ಪೇಪರ್‌ತೊಟ್ಟಿ (Dust Bin), ಗ್ರೀಟಿಂಗ್‌ಕಾರ್ಡ್, ಇತ್ಯಾದಿಗಳನ್ನು ತಯಾರಿಸುವುದು

ಔಷಧಿ ಸಸ್ಯಗಳ ಅಧ್ಯಯನ

- ಸ್ಥಳೀಯವಾಗಿ ದೊರೆಯುವ ಔಷಧಿಗಿಡಗಳಲ್ಲಿರುವ ಔಷಧಿ ಗುಣಗಳ ಬಗ್ಗೆ ಅಧ್ಯಯನ ಮಾಡುವುದು
- ಔಷಧಿಗಿಡಗಳ ಸಂರಕ್ಷಣೆಯನ್ನು ಮಾಡುವುದು
- ಔಷಧಿಗಿಡಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.

ಪರಿಸರ ಮತ್ತು ಅರಣ್ಯ ಮಂತ್ರಾಲಯ
ಭಾರತ ಸರ್ಕಾರ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಹಸಿರು ಪಡೆ






**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ**
'ಹಸಿರು ಭವನ' ದೊರೆಸಾನಿಪಾಳ್ಯ ಅರಣ್ಯ ಪ್ರದೇಶ
ವಿನಾಯಕನಗರ ವೃತ್ತ, ಜೆ.ಪಿ.ನಗರ ೫ನೇ ಹಂತ ಬೆಂಗಳೂರು-೫೬೦ ೦೭೮
ದೂರವಾಣಿ : ೦೮೦-೨೬೪೯೦೭೪೬/೭೪೭, ಫ್ಯಾಕ್ಸ್ : ೦೮೦-೨೬೪೯೦೭೪೫

## 2009-10ನೇ ಸಾಲಿನಲ್ಲಿ ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿಯಲ್ಲಿ ಇಕೋ-ಕ್ಲಬ್‌ಗಳು ಅನುಷ್ಠಾನಗೊಳಿಸಲು ಆಯ್ಕೆ ಮಾಡಲಾದ ವಿಷಯಗಳು:

ಅಶುಭಾಷಣ ಸ್ಪರ್ಧೆಗೆ ಆಯ್ಕೆ ಮಾಡಲಾಗಿರುವ ವಿಷಯಗಳು

1. ಅತಿವೃಷ್ಟಿ ಮತ್ತು ಅನಾವೃಷ್ಟಿ
2. ಓಜೋನ್ ಪದರದ ಹಾನಿಯನ್ನು ತಡೆಗಟ್ಟುವ ಕ್ರಮ
3. ಎಲೆಕ್ಟ್ರಾನಿಕ್ಸ್ ತ್ಯಾಜ್ಯಗಳ ನಿರ್ವಹಣೆ
4. ಜಾಗತಿಕ ತಾಪಮಾನ ಏರಿಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳು
5. ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಬಳಕೆಯಿಂದ ಪರಿಸರದ ಮೇಲಾಗುವ ಪರಿಣಾಮಗಳು
6. ಪರಿಸರದಲ್ಲಿ ಬಿದಿರಿನ ಮಹತ್ವ
7. ನಮ್ಮ ಸುತ್ತಲಿನ ತ್ಯಾಜ್ಯವಸ್ತುಗಳ ವರ್ಗೀಕರಣ ಮತ್ತು ನಿರ್ವಹಣೆ
8. ಅಂತರ್ಜಲ ನಿರ್ವಹಣೆ
9. ವನ್ಯಜೀವಿಗಳ ಸಂರಕ್ಷಣೆ
10. ಸಾಂಪ್ರದಾಯಿಕ ಶಕ್ತಿಯ ಮೂಲಗಳು ಮತ್ತು ಅವುಗಳಿಂದ ಪರಿಸರದ ಮೇಲಾಗುವ ಪರಿಣಾಮಗಳು
11. ಪರ್ಯಾಯ ಇಂಧನ: ಮೂಲಗಳು, ಅವಶ್ಯಕತೆ, ಪರಿಸರ ಸಂರಕ್ಷಣೆಯಲ್ಲಿ ಪಾತ್ರ
12. ನೈಸರ್ಗಿಕ ಸಂಪನ್ಮೂಲವನ್ನು, ಮಿತವಾಗಿ ಬಳಸಿ, ಪುನರಾವರ್ತಿಸಿ, ಪುನರ್ಬಳಕೆ ಮಾಡಿ.
13. ಸಾವಯವ ಕೃಷಿ ಮತ್ತು ಅದರ ಅಗತ್ಯ
14. ಆರೋಗ್ಯ ಮತ್ತು ನೈರ್ಮಲ್ಯ
15. ಜೀವವೈವಿಧ್ಯತೆಯಿಂದ ಮನುಷ್ಯನಿಗೆ ಆಗುವ ಅನುಕೂಲತೆಗಳು
16. ಅರಣ್ಯ ಉತ್ಪನ್ನಗಳು ಮತ್ತು ಅವುಗಳ ಸದ್ಬಳಕೆ
17. ಕರಾವಳಿ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿ ಅಳಿವೆಗಳ ಪಾತ್ರ
18. ಕರಾವಳಿ ಪರಿಸರದ ಸಮತೋಲನವನ್ನು ಕಾಪಾಡುವಲ್ಲಿ ಕಾಂಡ್ಲ ವನಗಳ (Mangrove forest) ಪಾತ್ರ

## ರಾಷ್ಟ್ರೀಯ ಹಸಿರು ಪಡೆ ಯೋಜನೆಯಡಿಯಲ್ಲಿ ಇಕೋ-ಕ್ಲಬ್‌ಗಳು 2009-10ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬೇಕಾದ ಚಟುವಟಿಕೆಗಳು

ಶಾಲಾವರಣದಲ್ಲಿ ಸ್ವಚ್ಛತೆ ಕಾಪಾಡುವುದು.

- ಶಾಲಾ ಮಕ್ಕಳಲ್ಲಿ ಕಸವನ್ನು ಕಡ್ಡಾಯವಾಗಿ ಕಸದ ಬುಟ್ಟಿಯಲ್ಲಿ ಹಾಕುವಂತೆ ಜಾಗೃತಿ ಮೂಡಿಸುವುದು
- ಪ್ರತಿಶಾಲೆಯಲ್ಲಿ ಕಸ ಶೇಖರಣೆಗಾಗಿ ಅಗತ್ಯವಿರುವ ಸ್ಥಳಗಳಲ್ಲಿ ಕಸದ ಬುಟ್ಟಿಯನ್ನು ಇಡುವುದು
- ಪ್ರತಿದಿನ ಶಾಲಾವರಣದಲ್ಲಿ ಉತ್ಪತ್ತಿಯಾಗುವ ಎಲ್ಲಾ ರೀತಿಯ ಕಸವನ್ನು ವರ್ಗೀಕರಿಸಿ ಪ್ರತ್ಯೇಕವಾದ ಕಸದ ಬುಟ್ಟಿಯಲ್ಲಿ ಶೇಖರಿಸುವುದು
- ಕಸವನ್ನು ವಿಂಗಡಿಸಿ, ಅದರಲ್ಲಿ ಮರುಬಳಕೆಗೆ ಯೋಗ್ಯವಾದ ಕಸವನ್ನು ಗುರುತಿಸಿ ಅದನ್ನು ಮರುಬಳಕೆ ಮಾಡುವುದು
- ಭೂಮಿಯಲ್ಲಿ ಕರುಗುವಂತಹ ಕಸವನ್ನು (ಮರದ ಎಲೆ, ಅನ್ನ, ಇತ್ಯಾದಿ) ಶಾಲೆಯಲ್ಲಿ ಸಾವಯವ ಕೃಷಿಗಾಗಿ ಬಳಕೆ ಮಾಡಲು ಪ್ರಯತ್ನಿಸುವುದು.
- ಶಾಲಾವರಣದಲ್ಲಿ ಬಿಸಾಡಿದ ಕಬ್ಬಿಣದ ಚೂರುಗಳು, ಮೊಳೆಗಳು ಮುಂತಾದವನ್ನು ಒಂದೆಡೆ ಸಂಗ್ರಹ ಮಾಡಿ ಮಾರಾಟ ಮಾಡುವುದು ಮತ್ತು ಹೀಗೆ ಸಂಗ್ರಹವಾದ ಹಣವನ್ನು ಇಕೋ-ಕ್ಲಬ್ ಚಟುವಟಿಕೆಗಳಲ್ಲಿ ಬಳಸಿಕೊಳ್ಳಬಹುದು.

ಶಾಲಾವರಣದಲ್ಲಿ ಜೀವವೈವಿಧ್ಯತೆ ಗುರುತಿಸುವುದು ಮತ್ತು ಹೆಸರಿಸುವುದು.

- ಶಾಲಾವರಣದಲ್ಲಿ ದೊರೆಯುವ ಸಸ್ಯಗಳು ಮತ್ತು ಪ್ರಾಣಿಗಳನ್ನು ಗುರುತಿಸಿ ಪಟ್ಟಿಮಾಡುವುದು
- ಶಾಲಾವರಣದಲ್ಲಿ ದೊಡ್ಡದಾಗಿ ಬೆಳೆದ ಮರಗಳಿದ್ದಲ್ಲಿ ಅವುಗಳ ಹೆಸರನ್ನು ನಾಮಫಲಕದ ಮೇಲೆ ಬರೆದು ಮರಕ್ಕೆ ಅಂಟಿಸುವುದು/ ತೂಗುಹಾಕುವುದು
- ಶಾಲಾವರಣದಲ್ಲಿ ಬೆಳೆದಿರುವ ಸಸ್ಯಗಳಿಂದ ಪರಿಸರಕ್ಕೆ ಆಗುವ ಉಪಯೋಗಗಳೇನು ಎಂದು ಅಧ್ಯಯನ ಮಾಡುವುದು
- ಹೂ ಗಿಡಗಳನ್ನು ಶಾಲಾವರಣದಲ್ಲಿ ಬೆಳೆಸುವುದು ಮತ್ತು ಅವುಗಳ ಉಪಯೋಗಗಳನ್ನು ಕುರಿತು ಅಧ್ಯಯನ ಮಾಡುವುದು
- ಶಾಲಾವರಣದಲ್ಲಿ ಬೆಳೆದಿರುವ ಗಿಡ-ಮರಗಳಲ್ಲಿ ವಾಸಿಸುತ್ತಿರುವ ಪಕ್ಷಿ ಮತ್ತು ಇತರೆ ಪ್ರಾಣಿಗಳನ್ನು ಗುರುತಿಸಿ ಹೆಸರಿಸುವುದು.

"ಶಾಲಾವನ" ಬೆಳೆಸುವುದು.

- ಶಾಲೆಗಳಲ್ಲಿ ಇರುವಂತಹ ಜಾಗದಲ್ಲಿ ಶಾಲಾವನವನ್ನು ನಿರ್ಮಿಸಲು ಕ್ರಮಕೈಗೊಳ್ಳುವುದು.
- ಬಹು ಉಪಯೋಗಿ ಮರಗಳಾದಂತಹ ಮಾವು, ಬೇವು, ಹಲಸು, ತೆಂಗು ಮುಂತಾದ ಮರಗಳನ್ನು ಬೆಳೆಸುವುದು
- ಔಷಧಿಗಿಡಗಳನ್ನು ಬೆಳೆಸುವ ಮೂಲಕ ಮಕ್ಕಳಲ್ಲಿ ಔಷಧಿಗಿಡಗಳ ಬಗ್ಗೆ ಅರಿವು ಮೂಡಿಸುವುದು.
- ಪ್ರತಿ ಐದರಿಂದ ಆರು ಮಕ್ಕಳಿಗೆ ಒಂದು ಗಿಡದ ನಿರ್ವಹಣೆಯ ಜವಾಬ್ದಾರಿಯನ್ನು ನೀಡುವುದು

ರಾಷ್ಟ್ರೀಯ ಹಸಿರು ಪಡೆಯಿಂದ ಪರಿಸರ ಜಾಗೃತಿ ಕಾರ್ಯಕ್ರಮ

- ಸಾರ್ವಜನಿಕರಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮಗಳಾದ ಪರಿಸರ ಜಾಥ, ಬೀದಿನಾಟಕ, ಇತ್ಯಾದಿಗಳನ್ನು ಆಯೋಜಿಸುವುದು
- ಶಾಲಾ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವುದು
- ಪರಿಸರ ನಿರ್ವಹಣೆಗೆ ಸಂಬಂಧಿಸಿದಂತಹ ಸಾಕ್ಷ್ಯಚಿತ್ರಗಳನ್ನು ಶಾಲೆಯಲ್ಲಿ ಪ್ರದರ್ಶಿಸಲು ಕ್ರಮಕೈಗೊಳ್ಳುವುದು
- ಪರಿಸರ ರಕ್ಷಣೆ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸುವುದು
- ಸಾರ್ವಜನಿಕರು ಇಕೋ-ಕ್ಲಬ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅರಿವು ಮೂಡಿಸುವುದು.

ಹಸಿರು ಫಲಕ (Eco-Club Notice Board) ಮತ್ತು ಹಸಿರು ಪತ್ರಿಕೆ (Green wall paper) ನಿರ್ವಹಣೆ.

- ಇಕೋ-ಕ್ಲಬ್ ಚಟುವಟಿಕೆಗಳನ್ನು ಶಾಲೆಯಲ್ಲಿ ಪ್ರಚಾರಗೊಳಿಸಲು ನೋಟೀಸ್ ಬೋರ್ಡ್‌ನಲ್ಲಿ ಪ್ರತ್ಯೇಕ ಸ್ಥಳವನ್ನು ನಿಗದಿ ಪಡಿಸಿಕೊಳ್ಳುವುದು.
- ಇಕೋ-ಕ್ಲಬ್ ಚಟುವಟಿಕೆಗಳಿಗೆ ಸಂಬಂಧಿಸಿದಂತಹ ಬರಹಗಳು, ಚಿತ್ರಗಳು, ಕವಿತೆಗಳು ಮುಂತಾದ ವಿಷಯಗಳನ್ನು ನೋಟಿಸ್ ಬೋರ್ಡ್ ಮೇಲೆ ಪ್ರದರ್ಶಿಸುವುದು
- ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ವಾರಪತ್ರಿಕೆ, ದಿನಪತ್ರಿಕೆಗಳಲ್ಲಿ ಮಾಹಿತಿ ಸಂಗ್ರಹಿಸಿ ಶಾಲೆಯ ನೋಟೀಸ್ ಬೋರ್ಡ್‌ನಲ್ಲಿ ಪ್ರದರ್ಶಿಸುವುದು (ಹಸಿರು ಪತ್ರಿಕೆ)

ಮಳೆ ನೀರು ಸಂಗ್ರಹಣೆ-ಅಗತ್ಯ, ಜಾಗೃತಿ, ನಿರ್ವಹಣೆ.

- ಮಳೆ ನೀರಿನ ಸಂಗ್ರಹಣೆ ಎಂದರೇನು? ಮಳೆನೀರಿನ ಸಂಗ್ರಹಣೆ ಯಾಕೆ ಅಗತ್ಯ ಎಂಬುವುದರ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು.
- ಭವಿಷ್ಯದಲ್ಲಿ ನೀರಿನ ಸಮಸ್ಯೆಯನ್ನು ಕುರಿತು ಚರ್ಚಿಸುವುದು ಮತ್ತು ಮಳೆನೀರಿನ ಸಂಗ್ರಹಣೆಯಿಂದ ಆಗುವ ಉಪಯೋಗಗಳ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸುವುದು
- ಶಾಲಾವರಣದಲ್ಲಿ ಮಳೆ ನೀರಿನ ಸಂಗ್ರಹಣೆಯ ವ್ಯವಸ್ಥೆಮಾಡುವುದು
- ಶಾಲಾವರಣದಲ್ಲಿ ಮಳೆ ನೀರಿನ ಸಂಗ್ರಹಣೆ ಮತ್ತು ನಿರ್ವಹಣೆಯ ಇಕೋ-ಕ್ಲಬ್ ಸದಸ್ಯರು ನಿರ್ವಹಿಸುವುದು.

ಸಾವಯವ ಗೊಬ್ಬರ ತಯಾರಿಕೆ ಮತ್ತು ಬಳಕೆ

- ಶಾಲಾವರಣದಲ್ಲಿ ದೊರೆಯುವ ಕಸ-ಕಡ್ಡಿ, ಎಲೆ, ಇತ್ಯಾದಿಗಳನ್ನು ಸಂಗ್ರಹಿಸಿ ಶಾಲಾವರಣದಲ್ಲಿ ಸಾವಯವ ಗೊಬ್ಬರವನ್ನು ತಯಾರಿಸುವ ಗುಂಡಿಯನ್ನು ಸಿದ್ಧಪಡಿಸಿ ಅದರಲ್ಲಿ ಹಾಕುವುದು.
- ಸಾವಯವ ಗೊಬ್ಬರದ ತಯಾರಿಕೆಯನ್ನು ಇತರೆ ಮಕ್ಕಳಿಗೆ ತೋರಿಸುವುದು
- ಸಾವಯವ ಗೊಬ್ಬರದ ಅಗತ್ಯತೆ ಮತ್ತು ಅದರ ಬಳಕೆಯ ಬಗ್ಗೆ ಮಕ್ಕಳಿಗೆ ಮಾಹಿತಿಯನ್ನು ನೀಡುವುದು
- ಶಾಲಾವರಣದಲ್ಲಿ ಬೆಳೆಸಿರುವ ಗಿಡ-ಮರಗಳಿಗೆ ಶಾಲಾವರಣದಲ್ಲಿ ತಯಾರಿಸಲಾಗುವ ಸಾವಯವ ಗೊಬ್ಬರವನ್ನು ಬಳಸುವುದು.

"ಪರಿಸರ ಸಂಬಂಧಿ ದಿನ"ಗಳ ಆಚರಣೆ

- ಶಾಲಾ ಇಕೋ-ಕ್ಲಬ್‌ನ ವತಿಯಿಂದ ಪರಿಸರಕ್ಕೆ ಸಂಬಂಧಿಸಿದ ದಿನಾಚರಣೆಯನ್ನು ಸೂಕ್ತವಾದ ಚಟುವಟಿಕೆಗಳ ಮೂಲಕ ಆಚರಿಸುವುದು